ಮೊನ್ನೆ ಮೊನ್ನೆ ಹೊಸ ಬಿಳಿ ಅಂಗಿ ಖರೀದಿಸಿದ್ದೆ. ಅದನ್ನು ಧರಿಸಿ ಹೊರಗೆ ಹೋದ ಅರ್ಧ ಗಂಟೆಯಲ್ಲೇ ಮಾಸಿ ಹೋದಂತೆ ಕೊಳೆಯಾಗಿತ್ತು. ಅಯ್ಯೋ ಎನಿಸಿತು; ಬೆಂಗಳೂರಿನ ಮಾಲಿನ್ಯವೇ ಅಂತಹದ್ದು. 'ಬಟ್ಟೆಗಳು ಕೊಳೆಯಾಗುತ್ತಿದ್ದಂತೆಯೇ ತಮ್ಮಷ್ಟಕ್ಕೆ ತಾವೇ ಸ್ವಚ್ಛಗೊಳ್ಳುವಂತಿದ್ದರೆ ಎಷ್ಟು ಚೆನ್ನಾಗಿರುತ್ತದೆ' ಎಂಬ ಭಾವನೆ ಹೊಮ್ಮಿತು. ಅಷ್ಟಕ್ಕೂ ಇಂತಹ ಕಲ್ಪನೆ ಇವತ್ತು ನಿನ್ನೆಯದ್ದಲ್ಲ. ಪ್ರಾಯಶಃ ವಸ್ತ್ರ ಕಂಡು ಹಿಡಿದ ದಿನದಿಂದಲೇ ಇಂತಹ ಆಲೋಚನೆ ಅನೇಕರಲ್ಲಿ ಮೊಳೆತಿರಬಹುದು. ಆದರೆ ಈಗ ಇದನ್ನು ಕೇವಲ ಕಲ್ಪನೆ ಎನ್ನುವಂತಿಲ್ಲ. 'ನ್ಯಾನೋ ಯುಗ'ದಲ್ಲಿ ಈಗ ಇದಕ್ಕೂ ಪರಿಹಾರ ಸಿಕ್ಕಿದೆ.

ಪುರುಷರಿಗೆ ದಿನವೂ ನೀಟಾಗಿ ಬಟ್ಟೆ ಧರಿಸಿ ಬೂಟು ಧರಿಸಿಕೊಂಡು ಹೋಗುವುದೆಂದರೆ ಹೆಮ್ಮೆ. ಬೂಟಿನ ಹಿಮ್ಮಡಿ ಸದ್ದು ಮಾಡುತ್ತಾ, ಅಕ್ಕ–ಪಕ್ಕದವರ ಗಮನ ಸೆಳೆಯುತ್ತಾ ಹೋಗಿ ಕಚೇರಿಯಲ್ಲಿ ತಮ್ಮ ಆಸನದಲ್ಲಿ ಕುಳಿತ ಮೇಲೆ ಪಕ್ಕ ಕುಳಿತವರು ಸದ್ದು ಮಾಡದೇ ಎದ್ದು ಹೋಗುತ್ತಾರೆ. ಅದಕ್ಕೆ ಕಾರಣ ಬೇರೇನಿಲ್ಲ. ಬೂಟು ಧರಿಸಿ ಕೂತ ವ್ಯಕ್ತಿಯ ಕಾಲಿನಿಂದ ಹೊಮ್ಮುವ ದುರ್ಗಂಧ. ಇದಕ್ಕೆ ಪರಿಹಾರ ಇಲ್ಲವೇ ಎಂದು ಕೆಲವರು ಬೂಟು ಧರಿಸುವ ಮುನ್ನ ಮೈಗೆಲ್ಲ ಸುಗಂಧ ಪೂಸಿಕೊಂಡು ಹೊರಟರೆ, ಇನ್ನು ಕೆಲವರು ಇದರ ಸಹವಾಸವೇ ಬೇಡ ಎಂದು ಬೂಟು ಧರಿಸುವುದನ್ನೇ ಬಿಟ್ಟು ಬಿಡುತ್ತಾರೆ. ಈ ದುರ್ಗಂಧಕ್ಕೂ ಈಗ ನ್ಯಾನೋದಿಂದ ಪರಿಹಾರ ಸಿಕ್ಕಿದೆ.

ಮಾನವ ತಾನೊಬ್ಬ ಸ್ವತಂತ್ರ ಜೀವಿ. ತನಗೆ ಯಾರ ಹಂಗೂ ಇಲ್ಲ ಎಂದು ಅಹಂನಿಂದ ಬೀಗುತ್ತಿರುತ್ತಾನೆ. ಆದರೆ, ಆತನ ದೇಹವೇ ಒಂದು ಬ್ರಹ್ಮಾಂಡವಿದ್ದಂತೆ. ಅದರೊಳಗೆ ಕೋಟಿಗಟ್ಟಲೆ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳು ಇರುತ್ತವೆ. ಅವುಗಳು ಕ್ರಮಬದ್ಧವಾಗಿ ಕೆಲಸ ಮಾಡುವುದರಿಂದಲೇ ನಾವು ನೀವು ಆರೋಗ್ಯದಿಂದಲೋ, ಅನಾರೋಗ್ಯದಿಂದಲೋ ಇರಲು ಸಾಧ್ಯ. ನೆನಪಿರಲಿ– ಇವುಗಳನ್ನು ನಾವು ನಿಯಂತ್ರಿಸಲೂ ಸಾಧ್ಯವಿಲ್ಲ. ದೇಹ ಪ್ರಕೃತಿ ನಿಯಮಕ್ಕೆ ತಕ್ಕಂತೆ ಅವು ಕೆಲಸ ಮಾಡುತ್ತವೆ. ಈ ದೇಹದ ಯಾವುದೋ ಮೂಲೆ ಕ್ಯಾನ್ಸರ್ ಅಥವಾ ಇನ್ಯಾವುದೋ ಕಾರಣಕ್ಕೆ ಕೆಟ್ಟು ಶಿಥಿಲವಾಗ ತೊಡಗಿದರೆ ಅದನ್ನು ಸರಿಪಡಿಸುವುದು ಅಷ್ಟು ಸುಲಭದ ಕೆಲಸವಲ್ಲ. ಔಷಧಕ್ಕಾಗಿ, ಕಿಮೋ ಥೆರಪಿಯಂತಹ ನೋವಿನಿಂದ ಕೂಡಿದ ಚಿಕಿತ್ಸೆಗೂ ಅದು ಬಗ್ಗುವುದಿಲ್ಲ. ಆದರೆ ನ್ಯಾನೋ ರೋಬಾಟ್ ಸೈನ್ಯವನ್ನು ಕಳುಹಿಸಿ ಕೆಟ್ಟು ಹೋದ ಭಾಗವನ್ನು ಸರಿಪಡಿಸಲು ಮತ್ತು ನಿರ್ದಿಷ್ಟ ಕೋಶಕ್ಕೆ ಔಷಧವನ್ನು ಉಣಿಸಿ ಬರಲು ಸಾಧ್ಯ. ರೋಬಾಟ್‌ಗಳು ದೇಹದೊಳಗೆ ಓಡಾಡಿ, 'ಶತ್ರು' ಕೋಶವನ್ನು ಪತ್ತೆ ಮಾಡಿ ದೇಹದಿಂದ ಹೊರ ಹಾಕಬಲ್ಲವು.

ಮೇಲೆ ನಮೂದಿಸಿದ್ದು ಮೂರು ಉದಾಹರಣೆಗಳು ಮಾತ್ರ. ನ್ಯಾನೋ ತಂತ್ರಜ್ಞಾನ ಇವತ್ತು ಇಂತಹ ನೂರೆಂಟು ಚಮತ್ಕಾರಗಳನ್ನು ಮಾಡುತ್ತಿದೆ. ನ್ಯಾನೋ ತಂತ್ರಜ್ಞಾನದ ಸಾಧನೆಗಳನ್ನು ಗಮನಿಸುತ್ತಾ ಹೋದರೆ ನಿಜಕ್ಕೂ ಇದೊಂದು ಅದ್ಭುತ ಪವಾಡ ಎಂಬ ಭಾವನೆ ಬರುತ್ತದೆ.

ನಾವು ಈಗ ಅಂತರಿಕ್ಷಕ್ಕೆ ಬಾಹ್ಯಾಕಾಶ ನೌಕೆಗಳನ್ನು ಕಳುಹಿಸುವಂತೆ ಮಾನವ ದೇಹದೊಳಗೆ ನ್ಯಾನೋ ರೋಬಾಟ್‌ಗಳನ್ನು ಕಳುಹಿಸಿ ರಕ್ತನಾಳ ಶುಚಿಗೊಳಿಸಬಹುದು. ನಿರ್ದಿಷ್ಟ ಕೋಶದೊಳಗೆ ಔಷಧಿಯನ್ನು ಸೇರಿಸಬಹುದು. ಇಂಗಾಲದ ನಾಳಗಳ ಆವಿಷ್ಕಾರ ನ್ಯಾನೋ ಕ್ಷೇತ್ರದಲ್ಲಿ ದೊಡ್ಡ

